## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ ಹೊಸದಾಗಿ 08 ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅವಶ್ಯಕವಾದ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:** 1. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ, ಇವರ ಪತ್ರ ಸಂಖ್ಯೆ: ವೈದ್ಯರು/324/2020-21, ದಿನಾಂಕ:16.12.2021
2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ,ಇವರ ಪತ್ರ ಸಂಖ್ಯೆ: ಅಭಿವೃದ್ಧಿ/192/2016-17,ದಿ:21-12-2021 ಮತ್ತು 21-02-2022.
3. ಕಾರಾವಿ ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ: U-16/12/1/Disp./2018/Kar.Med.II ದಿನಾಂಕ: 05-10-2021

*****

678 23 24
12 OCT 2023

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ, ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರು ಕಾರಾವಿ ನಿಗಮದ ಮಾರ್ಗಸೂಚಿಯಂತೆ ರಾಜ್ಯದಲ್ಲಿ 08 ಹೊಸ ಕಾರಾವಿ ಆಸ್ಪತ್ರೆಗಳನ್ನು ಪ್ರಾರಂಭಿಸಲು 21 ಗುತ್ತಿಗೆ ಆಧಾರದ ವಿಮಾ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಹೊಸದಾಗಿ ಸೃಜನೆ ಮಾಡುವ ಹಾಗೂ ಸದರಿ ಹುದ್ದೆಗಳಿಗೆ ಒಂದು ವರ್ಷದ ಅವಧಿಗೆ ಗುತ್ತಿಗೆ ವೈದ್ಯರನ್ನು ನೇಮಿಸಲು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ, ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ (3) ರ ಕಾರಾವಿ ನಿಗಮ, ನವದೆಹಲಿ ಇವರ ಪತ್ರದಂತೆ ರಾಜ್ಯದಲ್ಲಿ ಹೊಸದಾಗಿ 08 ಹೊಸ ಪ್ರದೇಶಗಳಲ್ಲಿ ಕಾರಾವಿ ಚಿಕಿತ್ಸಾಲಯಗಳನ್ನು ಆರಂಭಿಸಲು ತಾತ್ವಿಕ ಅನುಮೋದನೆ (In-Principle Approval) ನೀಡಿದ್ದು, ಸದರಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅವಶ್ಯಕವಿರುವ ಈ ಕೆಳಕಂಡ 137 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸುವಂತೆ ಕೋರಿರುತ್ತಾರೆ.

08 ಹೊಸ ಕಾರಾವಿ ಚಿಕಿತ್ಸಾಲಯಗಳ ವಿಧ ಹಾಗೂ ಸ್ಥಳಗಳ ವಿವರ.

| ಕ್ರ. ಸಂ.<br>Sl. No. | ಚಿಕಿತ್ಸಾಲಯದ ವಿಧ | ಸ್ಥಳ | ಒಟ್ಟು |
|---|---|---|---|
| 1 | 02 ವೈದ್ಯರ ಚಿಕಿತ್ಸಾಲಯ | 1. ಹತ್ತರಗಿ, ಬೆಳಗಾವಿ ಜಿಲ್ಲೆ<br>2. ಶಿರಸಿ, ಉತ್ತರ ಕನ್ನಡ ಜಿಲ್ಲೆ<br>3. ಕುಮಟಾ, ಉತ್ತರ ಕನ್ನಡ ಜಿಲ್ಲೆ<br>4. ಉಜಿರೆ, ದಕ್ಷಿಣ ಕನ್ನಡ ಜಿಲ್ಲೆ<br>5. ಪಡುಬಿದರಿ, ಉಡುಪಿ ಜಿಲ್ಲೆ | 05 |
| 2 | 03 ವೈದ್ಯರ ಚಿಕಿತ್ಸಾಲಯ | 1. ಯಾದಗಿರಿ, ಯಾದಗಿರಿ ಜಿಲ್ಲೆ<br>2. ಗಂಜಿಮಠ, ದಕ್ಷಿಣ ಕನ್ನಡ ಜಿಲ್ಲೆ | 02 |
| 3 | 5 ವೈದ್ಯರ ಚಿಕಿತ್ಸಾಲಯ | 1. ನೌಬಾಧ, ಬೀದರ್ ಜಿಲ್ಲೆ | 01 |

08 ಹೊಸ ಕಾರಾವಿ ಚಿಕಿತ್ಸಾಲಯಗಳಿಗೆ ಅವಶ್ಯಕವಿರುವ ಹುದ್ದೆಗಳ ವಿವರ .

| ಕ್ರ. ಸಂ | ಚಿಕಿತ್ಸಾಲಯದ ಹೆಸರು | ವಿ.ವೈ. | ಕ. ಅ. | ಪ್ರ.ದ.ಸ | ಶುಶ್ರೂಷಕರು | ಫಾರ್ಮಸಿಸ್ಟ್ | ಕಿ.ಪ್ರ.ಶಾ. ತಂ. | ಡ್ರೆಸರ್ | ದ್ವಿ ದಸ | ಗ್ರೂಪ್ ಡಿ | ಒಟ್ಟು |
|---|---|---|---|---|---|---|---|---|---|---|---|
| 1 | ಹತ್ತರಗಿ | 02 | - | 02 | 02 | 02 | 01 | 01 | 01 | 03 | 14 |
| 2 | ಶಿರಸಿ | 02 | - | 02 | 02 | 02 | 01 | 01 | 01 | 03 | 14 |
| 3 | ಕುಮಟಾ | 02 | - | 02 | 02 | 02 | 01 | 01 | 01 | 03 | 14 |
| 4 | ಉಜಿರೆ | 02 | - | 02 | 02 | 02 | 01 | 01 | 01 | 03 | 14 |
| 5 | ಪಡುಬಿದರಿ | 02 | - | 02 | 02 | 02 | 01 | 01 | 01 | 03 | 14 |
| 6 | ಯಾದಗಿರಿ | 03 | - | 02 | 02 | 03 | 01 | 02 | 02 | 05 | 20 |
| 7 | ಗಂಜಿಮಠ | 03 | - | 02 | 02 | 03 | 01 | 02 | 02 | 05 | 20 |
| 8 | ನೌಬಾಧ | 05 | 01 | 02 | 04 | 05 | 01 | 02 | 02 | 05 | 27 |
| | ಒಟ್ಟು | **21** | **01** | **16** | **18** | **21** | **08** | **11** | **11** | **30** | **137** |

ಈ ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದಲ್ಲಿ 08 ಹೊಸ ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅಗತ್ಯವಿರುವ ಒಟ್ಟಾರೆ 137 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಿ ಸರ್ಕಾರದ ವತಿಯಿಂದ ಆದೇಶವನ್ನು ಹೊರಡಿಸುವಂತೆ ಕಾರಾವಿ ನಿರ್ದೇಶಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕಾಇ 92 ಎಲ್ ಎಸ್ ಐ 2021</u>
<u>ದಿನಾಂಕ:10-10-2023</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಾರಾವಿ ಯೋಜನೆ ವೈದ್ಯಕೀಯ ಸೇವೆಯಡಿಯಲ್ಲಿ ರಾಜ್ಯದಲ್ಲಿ 08 ಹೊಸ ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅವಶ್ಯಕವಿರುವ ಈಗಾಗಲೇ ಸೃಜಿಸಲಾಗಿರುವ ಈ ಕೆಳಕಂಡ 21 ಗುತ್ತಿಗೆ ಆಧಾರದ ವಿಮಾ ವೈದ್ಯಾಧಿಕಾರಿಗಳ ಹುದ್ದೆಗಳ ಜೊತೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಒಟ್ಟು 54 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಸರ್ಕಾರದ ಅನುಮತಿ ನೀಡಿದೆ.

| ಕ್ರಸಂ | ಚಿಕಿತ್ಸಾಲಯದ ಹೆಸರು | ವಿಮಾ ವೈದ್ಯಾಧಿಕಾರಿಗಳು |
|---|---|---|
| 1 | ಹತ್ತರಗಿ | 02 |
| 2 | ಶಿರಸಿ | 02 |
| 3 | ಕುಮಟಾ | 02 |
| 4 | ಉಜಿರೆ | 02 |
| 5 | ಪಡುಬಿದರಿ | 02 |
| 6 | ಯಾದಗಿರಿ | 03 |
| 7 | ಗಂಜಿಮಠ | 03 |
| 8 | ನೌಬಾಧ | 05 |
| | ಒಟ್ಟು | 21 |

## 54 ವಿವಿಧ ವೃಂದದ ಹುದ್ದೆಗಳ ವಿವರ

| ಕ್ರ.ಸಂ | ಕಾ.ರಾ.ವಿ ಚಿಕಿತ್ಸಾಲಯಗಳಿರುವ ಸ್ಥಳ/ಪ್ರದೇಶ | ಜಿಲ್ಲೆ | ವೈದ್ಯಾಧಿಕಾರಿಗಳ ಸಂಖ್ಯೆ | ಸೃಜಿಸಲು ಸಹಮತಿ ನೀಡಿರುವ ಹುದ್ದೆಗಳ ವಿವರ. | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|---|---|---|
| 1 | ಹತ್ತರಗಿ | ಬೆಳಗಾವಿ | 02 | SDA cum Record Sorter | 1X5=5 | Direct Recruitment/ Deputation |
| 2 | ಶಿರಸಿ | ಉತ್ತರ ಕನ್ನಡ | | Staff Nurse | 2X5=10 | Outsourcing |
| 3 | ಕುಮಟಾ | ಉತ್ತರ ಕನ್ನಡ | | Pharmacist | 1X5=5 | |
| 4 | ಉಜಿರೆ | ದಕ್ಷಿಣ ಕನ್ನಡ | | Group-D | 2X5=10 | |
| 5 | ಪಡುಬಿದ್ರಿ | ಉಡುಪಿ | | | | |
| | | | | Total | 6X5=30 | |
| 6 | ಯಾದಗಿರಿ | ಯಾದಗಿರಿ | 03 | SDA cum Record Sorter | 1X2=2 | Direct Recruitment/ Deputation |
| 7 | ಗಂಜಿಮಠ | ದಕ್ಷಿಣ ಕನ್ನಡ | | Staff Nurse | 2X2=4 | Outsourcing |
| | | | | Pharmacist | 1X2=2 | |
| | | | | Group-D | 2X2=4 | |
| | | | | Total | 6X2=12 | |
| 8 | ನೌಬಾಧ | ಬೀದರ್ | 05 | Office Superintendent | 1 | As per C& R |
| | | | | SDA cum Record Sorter | 1 | Direct Recruitment/ Deputation |
| | | | | Staff Nurse | 4 | Outsourcing |
| | | | | Pharmacist | 2 | |
| | | | | Junior Lab Technician | 1 | |
| | | | | Group-D | 1 | |
| | | | | Total | 12 | |

ಷರತ್ತುಗಳು:

1. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ/ ನೇರ ನೇಮಕಾತಿಯಿಂದ ಭರ್ತಿ ಮಾಡುವ ಹುದ್ದೆಗಳ NPS pension contribution ಅನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದಿಲ್ಲ. ಸದರಿ ವೆಚ್ಚವನ್ನು ESI ಸಂಸ್ಥೆಯೇ ಭರಿಸುವುದು.

2. ಮೊದಲ 3 ವರ್ಷಗಳ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು. ಅನಂತರ ರಾಜ್ಯ ಸರ್ಕಾರದ ಪಾಲಿನ 12.5% ಅನ್ನು ಮಾತ್ರ ರಾಜ್ಯ ಸರ್ಕಾರವು ಒದಗಿಸುತ್ತದೆ. ಉಳಿದ 87.5% ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಪಡೆಯುವುದು.

ಸದರಿ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 284 ಎಫ್.ಆರ್.ಸಿ. 2022 ದಿನಾಂಕ:13-09-2023 ಮತ್ತು ಆಇ/32/ವೆಚ್ಚ-9/2022 ದಿನಾಂಕ:14-09-2023ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
Hemalatha. P.
(ಹೇಮಲತಾ.ಪಿ)
ಪೀಠಾಧಿಕಾರಿ-05,
ಕಾರಾವಿಯೋವ್ಯೆ ಸೇವೆಗಳು,
ಕಾರ್ಮಿಕ ಇಲಾಖೆ.

ಇವರಿಗೆ:
1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-560010.
3. ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ.

ಪ್ರತಿ ಮಾಹಿತಿಗಾಗಿ:
1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

**ಸಂಖ್ಯೆ:ESIS/ಅಭಿವೃದ್ಧಿ/192/16-17(ಭಾಗ-3)** **ದಿನಾಂಕ: 17-10-2023**

**ಹಿಂಬರಹ**

ರಾಜ್ಯದಲ್ಲಿ 08 ಹೊಸ ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅವಶ್ಯಕವಿರುವ ಹುದ್ದೆಗಳನ್ನು ಈ ಮೇಲ್ಕಂಡ ಸರ್ಕಾರದ ಆದೇಶದ ಪತ್ರದಲ್ಲಿ ಸೃಜಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶವನ್ನು ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

ಸದರಿ ಸರ್ಕಾರದ ಆದೇಶವನ್ನು ಈ ಇಲಾಖೆಯ ಅಧಿಕೃತ ಜಾಲತಾಣ **https://esisms.karnataka.gov.in/** ರಲ್ಲಿ ಅಪಲೋಡ್ ಮಾಡಲಾಗಿದೆ.

21/10/23
ನಿರ್ದೇಶಕರು (ಪ್ರ)
ಕಾರಾವಿ ಯೋ ವೈ ಸೇವೆ.
17/10/23 17/10 19/10

ರವರಿಗೆ,
1. ನಿರ್ದೇಶನಾಲಯದ ವೈದ್ಯರು / ಸಿಬ್ಬಂದಿ / ಫಾರ್ಮಸಿಸ್ಟ್ / ಶುಶ್ರೂಷಕರು / ಗ್ರೂಪ್ ಡಿ / ಕಟ್ಟಡ / ಆಯವ್ಯಯ / ಖಜಾನೆ – 2 / ಹೆಚ್‌ಆರ್‌ಎಂಎಸ್ ಸಂಕಲನಗಳು

ಪ್ರತಿಯನ್ನು:
1. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ
2. ವೈದ್ಯಕೀಯ ಅಧೀಕ್ಷಕರು / ಆಡಳಿತ ವಿಮಾ ವೈದ್ಯಾಧಿಕಾರಿಗಳು, ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ ...........................................................................................
3. ಕಛೇರಿ ಪ್ರತಿ.

Dev:/Himbaraha 2023-24